ಉಡುಪಿ ತಾಲ್ಲೂಕಿನಲ್ಲಿ ಕೆಂಪುಕಲ್ಲು ಮತ್ತು ಶಿಲೆಕಲ್ಲುಗಳ ಆಕ್ರಮ ಸಾಗಾಣಿಕೆ.

2086 - ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ (ಕುಂದಾಪುರ) : ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕು ನಂಜೂರು ಗ್ರಾಮದಲ್ಲಿ ಕೆಂಪು ಕಲ್ಲು ಮತ್ತು ಶಿಲೆ ಕಲ್ಲು ಹೊರೆಯುವ ಪರವಾನಿಗೆ ಪಡೆದ ಸರ್ವೆ ನಂಬರು, ವಿಸ್ತೀರ್ಣ ಮತ್ತು ಪರವಾನಿಗೆದಾರರ ವಿಳಾಸವೇನು?

ಆ) ಇವರಿಂದ ಪ್ರತಿವರ್ಷ ಸರ್ಕಾರಕ್ಕೆ ಬರುವ ರಾಯಲ್ಟಿ ಎಷ್ಟು? (ಪರವಾನಿಗೆ ಸಹಿತ ವಿವರ ಒದಗಿಸುವುದು)

ಇ) ಇದರಲ್ಲಿ ಬಹಳಷ್ಟು ಆಕ್ರಮಗಳು ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಈ ಕಲ್ಲುಗಳ ಆಕ್ರಮ ಸಾಗಾಟ ತಡೆಯಲು ಪರವಾನಿಗೆ ವ್ಯವಸ್ಥೆ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ?

ಶ್ರೀ ಎಸ್.ಡಿ. ಜಯರಾಮ್ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ಗುತ್ತಿಗೆದಾರರ ವಿಳಾಸ ಮತ್ತಿತರ ವಿವರವನ್ನು ಪಟ್ಟಿಯಲ್ಲಿ ಲಗತ್ತಿಸಿದೆ.

ಆ) ಸುಮಾರು ರೂ. 16,958.00 ರಾಯಲ್ಟಿ ಬರುತ್ತಿದೆ.

ಇ) ಈ ಗ್ರಾಮದಲ್ಲಿ ಆಕ್ರಮ ಗಣಿಗಾರಿಕೆ ಬಗ್ಗೆ ಯಾವ ದೂರು ಅಥವಾ ವರದಿಯ ಇರುವುದಿಲ್ಲ. ಈ ರೀತಿ ಕಂಡು ಬಂದಲ್ಲಿ ಆಕ್ರಮ ಗಣಿಗಾರಿಕೆಯಲ್ಲಿ ತೊಡಗಿರುವ ಸಂಬಂಧಪಟ್ಟವರನ್ನು ಕಲ್ಲು ಗಣಿ ಗುತ್ತಿಗೆಗೆ ಅರ್ಜಿ ಸಲ್ಲಿಸಿ ಮಂಜೂರಾತಿ ಪಡೆಯಲು ಸೂಚಿಸಲಾಗುವುದು.

ಈ) ಪರವಾನಿಗೆ ವ್ಯವಸ್ಥೆಯನ್ನು 1994ರ ಉಪಖನಿಜ ರಿಯಾಯಿತಿ ನಿಯಮ 42ರಲ್ಲಿ ಸೂಚಿಸಿರುವಂತೆ ಕಡ್ಡಾಯ ಮಾಡಲಾಗಿದೆ.